### ಜೀನ್ಸ್‌ಗೆ ಆದ್ಯತೆ ಹೀಗಿರಲಿ...

- ಜೀನ್ಸ್ ಪ್ಯಾಂಟ್‌ಗಳಲ್ಲಿ ಸ್ಕಿನ್ ಟೈಟ್, ಸ್ಲಿಮ್ ಫಿಟ್, ಸ್ಟ್ರೈಟ್‌ಬೂಟ್ ಕಟ್, ಆ್ಯಂಕಲ್ ಲೆಂತ್, ಬಾಯ್ ಫ್ರೆಂಡ್ ಜೀನ್ಸ್ ಸೇರಿದಂತೆ ಹಲವು ಬಗೆಯ ಪ್ಯಾಂಟ್‌ಗಳನ್ನು ಕಾಣಬಹುದು. ಈ ಮಾದರಿಯಲ್ಲಿ ರಿಪ್ಡ್, ಟೋರ್ನ್ ಹಾಗೂ ಡಿಸ್ಟ್ರೆಸ್ಡ್ ಆಯ್ಕೆಗಳನ್ನು ದೇಹಕ್ಕೆ ಹೊಂದುವಂತೆ ಆಯ್ದುಕೊಳ್ಳಬಹುದು.
- ರಿಪ್ಡ್, ಟೋರ್ನ್, ಡಿಸ್ಟ್ರೆಸ್ಡ್‌ಗೆ ಯುವತಿಯರು ಕೊಂಚ ಸಡಿಲವುಳ್ಳ ಶರ್ಟ್, ಟೀ ಶರ್ಟ್, ಸ್ಲೀವ್ ಲೆಸ್ ಟಾಪ್ ಧರಿಸಿದರೆ ಆಕರ್ಷವಾಗಿ ಕಾಣಬಹುದು.
- ರಿಪ್ಡ್, ಟೋರ್ನ್, ಡಿಸ್ಟ್ರೆಸ್ಡ್‌ಗೆ ಚಪ್ಪಲಿಗಿಂತ ಶೂ ಧರಿಸಿ, ಓಪನ್ ಹೇರ್ ಮಾಡಿ, ಸನ್ ಗ್ಲಾಸ್ ಬಳಸಿದರೆ ವಿಶೇಷ ಲುಕ್ ಸಿಗುತ್ತದೆ.
- ಹರಿದ ಜೀನ್ಸ್ ಧರಿಸಿದಾಗ ಟೀ ಶರ್ಟ್, ಇನ್‌ಶರ್ಟ್ ಮಾಡಿದರೆ ಹೆಚ್ಚು ಸೂಕ್ತ. ಯುವತಿಯರು ಹೈಹೀಲ್ಡ್ ಬಳಸಬಹುದು. ಸ್ಕಿನ್ನಿ ಫಿಟ್ ಜೀನ್ಸ್‌ಗೆ ಟೀ ಶರ್ಟ್, ಇನ್ ಶರ್ಟ್ ಸೂಕ್ತ.
- ಟೀ ಶರ್ಟ್ ಮೇಲೆ ಜೀನ್ಸ್ ಜಾಕೆಟ್ ವಿಶೇಷ ಮೆರುಗು ನೀಡುತ್ತದೆ. ಎತ್ತರವನ್ನು ಕೊಂಚ ಹೆಚ್ಚಿಸಬಲ್ಲ ಶೂ ಅಥವಾ ಹೈ ಹೀಲ್ಡ್ಸ್ ಆಯ್ಕೆ ಇರಲಿ.
- ಬಾಯ್ ಫ್ರೆಂಡ್ ಜೀನ್ಸ್ ಪ್ಯಾಂಟ್‌ಗೆ ಸಡಿಲವಾದ, ಸ್ಲೀವ್ ಲೆಸ್ ಅಥವಾ ಫುಲ್ ಸ್ಲೀವ್ ಟೀ ಶರ್ಟ್ ಧರಿಸಿ, ಟೋಪಿ ಧರಿಸಿ.
- ಜೀನ್ಸ್ ಜೊತೆಗೆ ವರ್ಣರಂಜಿತ ಮತ್ತು ವಿಶೇಷ ಲೇಸ್‌ಗಳುಳ್ಳ ಶೂ ಧರಿಸುವುದು ಆಕರ್ಷಕವೆನಿಸುತ್ತದೆ.



ಇವು ತಮ್ಮ ಟ್ರೆಂಡಿ ಗುಣವನ್ನು ಉಳಿಸಿಕೊಂಡಿವೆ. ತಾವು ಮಿಕ್ಕೆಲ್ಲರಿಗಿಂತ ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಳ್ಳಬೇಕೆಂದು ಹಾತೊರೆಯುವ ಕಾಲೇಜು ಯುವಕ–ಯುವತಿಯರಂತೂ ಹೆಚ್ಚಿನ ಆದ್ಯತೆಯನ್ನು ರಿಪ್ಡ್ ಜೀನ್ಸ್‌ಗೆ ನೀಡುತ್ತಾರೆ.

### ಟೋರ್ನ್ ಜೀನ್ಸ್

ರಿಪ್ಡ್ ಜೀನ್ಸ್‌ನ ಮತ್ತೊಂದು ರೂಪವೇ ಟೋರ್ನ್ ಜೀನ್ಸ್. ರಿಪ್ಡ್ ಜೀನ್ಸ್‌ನಲ್ಲಿ ಸಣ್ಣ ಸಣ್ಣದಾಗಿ ಹರಿದಿದ್ದರೆ ಟೋರ್ನ್ ಜೀನ್ಸ್‌ನ ಪ್ಯಾಂಟ್‌ನಲ್ಲಿ ಬಹುಪಾಲು ಬಟ್ಟೆಯೇ ಮಾಯವಾಗಿರುತ್ತದೆ. ಪ್ಯಾಂಟ್‌ನ ಅಲ್ಲಲ್ಲಿ ದೊಡ್ಡ ದೊಡ್ಡದಾಗಿ ವಿವಿಧ ಆಕಾರದಲ್ಲಿ ಬಟ್ಟೆಯನ್ನು ಕತ್ತರಿಸಿ ದೊಡ್ಡ ದೊಡ್ಡ ರಂಧ್ರಗಳನ್ನಾಗಿಸುವ ಗುಣವುಳ್ಳ ಟೋರ್ನ್‌ಗೆ ಯುವಕರು ಆಕರ್ಷಣೆಗೊಳ್ಳುವುದು ತೀರಾ ಕಡಿಮೆ. ಯುವತಿಯರೇ ಇದರ ಹೆಚ್ಚಿನ ಪ್ರಿಯರು. ಫ್ಯಾಷನ್ ಲೋಕದಲ್ಲಿ ಮಾದಕವಾಗಿ ಕಾಣಿಸಿಕೊಳ್ಳುವ ದೃಷ್ಟಿಯಿಂದ ಟೋರ್ನ್‌ಗೆ ಹೆಚ್ಚಾಗಿ ಮುಗಿಬೀಳುತ್ತಾರೆ.

### ಡಿಸ್ಟ್ರೆಸ್ಡ್ ಜೀನ್ಸ್

ಡಿಸ್ಟ್ರೆಸ್ಡ್ ಜೀನ್ಸ್ ಧರಿಸಿದಾಗ ರಿಪ್ಡ್, ಟೋರ್ನ್ ಜೀನ್ಸ್‌ನಂತೆಯೇ ವಿಂಟೇಜ್ ಲುಕ್ ನೀಡುತ್ತದೆ. ಈ ಮಾದರಿಯಲ್ಲಿ ಜೀನ್ಸ್‌ಗಳು ಸೀಳಿರುವ ರಂಧ್ರಗಳ ಜೊತೆ ಜೊತೆಗೆ ಪ್ಯಾಂಟ್‌ನ ಅಲ್ಲಲ್ಲಿ ಬಟ್ಟೆಯ ನೂಲು ಹೊರಬಂದಂತೆ ತಯಾರಿಸಲಾಗಿರುತ್ತದೆ. ಮಸುಕಾದ ರೀತಿ, ಪ್ಯಾಂಟ್‌ನ ಅಲ್ಲಲ್ಲಿ ಬಿಳುಪುಗಾಗಿಸಿದಂತೆಯೂ ರೂಪುಗೊಳ್ಳುವ ಡಿಸ್ಟ್ರೆಸ್ಡ್ ಸಹ ಇಂದಿನ ಫ್ಯಾಷನ್ ಲೋಕದ ಟ್ರೆಂಡಿ ಡ್ರೆಸ್. ಸುಕ್ಕುಗಟ್ಟಿದಂತಹ ಮಾದರಿಯಲ್ಲೂ ಇದನ್ನು ಕಾಣಬಹುದು.

ಸಾಧಾರಣ ಜೀನ್ಸ್ ಪ್ಯಾಂಟ್‌ಗಳನ್ನು ಯಾರು ಬೇಕಾದರೂ ರಿಪ್ಡ್, ಟೋರ್ನ್ ಹಾಗೂ ಡಿಸ್ಟ್ರೆಸ್ಡ್ ಆಗಿಯೂ ರೂಪಾಂತರ ಮಾಡಿಕೊಳ್ಳಬಹುದು. ಮೇಲೆ ತಿಳಿಸದಂತೆಯೇ ಪ್ಯಾಂಟ್‌ನ ಮೊಣಕಾಲು ಸೇರಿದಂತೆ ಒಂದೆರಡು ಕಡೆ ಸಣ್ಣ ಸಣ್ಣದಾರಿ ರಂಧ್ರಗಳನ್ನು ಕತ್ತರಿಸಿಕೊಂಡರೆ ರಿಪ್ಡ್ ಜೀನ್ಸ್ ಸಿದ್ಧ. ದೊಡ್ಡ ದೊಡ್ಡದಾಗಿ ಕತ್ತರಿಸಿಕೊಂಡರೆ ಟೋರ್ನ್ ಜೀನ್ಸ್ ರೆಡಿಯಾದರೆ ನೂಲು ಹೊರಬರುವಂತೆ ಕಿತ್ತರೆ ಬಟ್ಟೆಯ ಮೇಲ್ಪದರವನ್ನೇ ತೆಗೆದರೆ ಡಿಸ್ಟ್ರೆಸ್ಡ್ ಸಿದ್ಧವಾಗುತ್ತದೆ.

ಇಲ್ಲಿ ಬಹುಮುಖ್ಯವಾದ ವಿಚಾರವೆಂದರೆ ಹಲವು ಪ್ರಸಿದ್ಧ ಜೀನ್ಸ್ ಬಟ್ಟೆ ತಯಾರಕ ಕಂಪನಿಗಳು ಮಾರಾಟವಾಗದೇ ಉಳಿಯುವ ಸಾಧಾರಣ ಜೀನ್ಸ್ ಪ್ಯಾಂಟ್‌ಗಳನ್ನು ರಿಪ್ಡ್, ಟೋರ್ನ್ ಹಾಗೂ ಡಿಸ್ಟ್ರೆಸ್ಡ್ ಜೀನ್ಸ್ ಆಗಿ ಬದಲಾಯಿಸಿ ಮರುಮಾರಾಟ ಮಾಡುತ್ತವೆ. ಸೀಮಿತ ಬಣ್ಣಗಳಲ್ಲಷ್ಟೆ ಸಿಗುವ ಜೀನ್ಸ್ ಪ್ಯಾಂಟ್‌ಗೆ ಹೊಂದುವ ಶರ್ಟ್, ಟಾಪ್ ರೀತಿಯ ಬಟ್ಟೆಗಳನ್ನು ಧರಿಸಿ ಮಿಂಚಬಹುದು.